ಕರ್ನಾಟಕ ಸರ್ಕಾರ

**ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

**ರಾಷ್ಟ್ರೀಯ ಸೇವಾ ಯೋಜನೆ**

**ಸಂಖ್ಯೆ: ಪಪೂಶಿ:ರಾಸೇಯೋ:ಅರಾಯೋ:06 /2015-16.** **ದಿನಾಂಕ : 18/06/2016.**

**ಜ್ಞಾಪನ**

ವಿಷಯ: ಅಂತರ ರಾಷ್ಟ್ರೀಯ ಯೋಗ ದಿನ ಆಚರಿಸುವ ಬಗ್ಗೆ.

ಉಲ್ಲೇಖ: 1) ಯುಸೇಇ/246/ಯುಸೇಕ್ರೀ 2016 ದಿನಾಂಕ 09.06.2016.

2) ಯುಸೇಇ/ಯುಸೇಕ್ರೀ 2016 ದಿನಾಂಕ 10.06.2016.

3) ಸಂಖ್ಯೆ:ಯುಸೇಇ/ರಾಸೇಯೋ/ಸಾಮಾನ್ಯ/2016-17 ದಿನಾಂಕ: 14.06.2016

***

ಮೇಲಿನ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಪಟ್ಟಂತೆ ದಿನಾಂಕ 21.06.2016 ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಉನ್ನತ ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮವು ಅಂದು ಬೆಳಿಗ್ಗೆ 7.00 ರಿಂದ 9.00 ರವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಜರುಗಲಿದೆ.

ಸದರಿ ಸಮಾರಂಭಕ್ಕೆ ಬೆಂಗಳೂರು ನಗರದ ಪದವಿ ಪೂರ್ವ ಕಾಲೇಜುಗಳಿಂದ ಎಸ್.ಎಸ್.ಎಸ್ ಅಧಿಕಾರಿಗಳು ಮತ್ತು 100 ಜನ ಎನ್.ಎಸ್.ಎಸ್. ಸ್ವಯಂಸೇವಕ/ಸೇವಕಿಯರನ್ನು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ನಿರ್ದೇಶನ ನೀಡುವಂತೆ ಸೂಚಿಸಿದೆ. ( ದಿನಾಂಕ 20-6-2015 ರಿಂದ 21-06-2016 ರವರೆಗೆ ಶ್ರೀ ಶ್ರೀ ಶ್ರೀ ರವಿಶಂಕರ ಆಶ್ರಮ ಆರ್ಟ್ ಆಫ್ ಲೀವಿಂಗ್ ಕನಕಪುರ ರಸ್ತೆ, ಬೆಂಗಳೂರು ರಲ್ಲಿ ನಡೆಸಲಾಗುತ್ತಿರುವ "ವಿಶ್ವ ಯೋಗ ದಿನಾಚರಣೆ 2016" ರಲ್ಲಿ ಪಾಲ್ಗೋಳ್ಳುತ್ತಿರುವ ಕಾಲೇಜುಗಳನ್ನು ಹೊರತುಪಡಿಸಿ)

ಸದರಿ ಸಮಾರಂಭದಲ್ಲಿ ಭಾಗವಹಿಸುವುದು ಕಡ್ಡಾಯವಾಗಿದ್ದು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ಹೆಚ್ಚಿನ ಪ್ರಾಧ್ಯಾನ್ಯತೆ ನೀಡಿ ವಿದ್ಯಾರ್ಥಿಗಳನ್ನು ಹೆಚ್ಚು ಸುರಕ್ಷತೆಯಿಂದ ಸಮಾರಂಭಕ್ಕೆ ಕೊಂಡೊಯ್ಯಲು ಸೂಕ್ತ ಭದ್ರತೆ ನೀಡಿ ಕಳುಹಿಸಿಕೊಡತಕ್ಕದ್ದು. ಎನ್.ಎಸ್.ಎಸ್. ಘಟಕಗಳನ್ನು ಹೊಂದಿರುವ ಕಾಲೇಜುಗಳಲ್ಲಿನ ಕಾರ್ಯಕ್ರಮಾಧಿಕಾರಿಗಳು ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡುವುದು.

ರಾಜ್ಯ ಸಂಯೋಜನಾಧಿಕಾರಿಗಳು,
ಎನ್.ಎಸ್.ಎಸ್ ಕೋಶ,
ಪದವಿ ಪೂರ್ವ ಶಿಕ್ಷಣ ಇಲಾಖೆ.
ಬೆಂಗಳೂರು.

ಪ್ರತಿ:

1.ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.

2. ಕಛೇರಿ ಪ್ರತಿ.